**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,**
**ದೊಡ್ಡಬಳ್ಳಾಪುರ**

**ಸಿ ಸಿ ನಂ : 3491/2021**

**ಪಿ ಡಬ್ಲ್ಯೂ - 06**

**ಸಿ ಡಬ್ಲ್ಯೂ - 11**

**ದಿಃ 23.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಹೆಸರು ಃ ನರಸಿಂಹಮೂರ್ತಿ. ಕೆ**
**ತಂದೆಯ ಹೆಸರು ಃ ಕೆಂಪೋಜಿ ರಾವ್**
**ವಯಸ್ಸು ಃ 59 ವರ್ಷ**
**ಉದ್ಯೋಗ ಃ ಹಿರಿಯ ಮೋಟಾರ್ ವಾಹನ ನಿರೀಕ್ಷಕರು**
**ವಿಳಾಸ ಃ ದೇವನಹಳ್ಳಿ**

**ಮುಖ್ಯ ವಿಚಾರಣೆ ಃ ಸ ಸ ಅ ರವರಿಂದ**

ನಾನು ಆಗಸ್ಟ್ 2014 ರಿಂದ ದೇವನಹಳ್ಳಿಯಲ್ಲಿ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ ಕಛೇರಿಯಲ್ಲಿ ಮೋಟಾರ್ ವಾಹನಗಳ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 16.03.2021 ರಂದು ಚಾಸಾ-15 ರವರು ವಾಹನ ತಪಾಸಣೆಗಾಗಿ ಮನವಿಯನ್ನು ಸಲ್ಲಿಸಿದ್ದರು. ಸದರಿ ಮನವಿಯ ಮೇರೆಗೆ ನಾನು ಅದೇ ದಿನ ಬೆಳಿಗ್ಗೆ 11-30 ಗಂಟೆ ಸಮಯಕ್ಕೆ ದೊಡ್ಡಬೆಳವಂಗಲ ಪೊಲೀಸ್ ಠಾಣೆಯ ಆವರಣಕ್ಕೆ ಭೇಟಿ ನೀಡಿ ಅಲ್ಲಿ ನಿಲ್ಲಿಸಿದ್ದ ಟ್ರ್ಯಾಕ್ಟರ್ ಟ್ರೈಲರ್ ಸಂಖ್ಯೆ ಕೆಎ-44-0857, ಕೆಎ-44-0858 ವಾಹನವನ್ನು ತಪಾಸಣೆ ಮಾಡಿದೆನು. ಸದರಿ ವಾಹನವನ್ನು ಪರೀಕ್ಷಿಸಿದಾಗ ಈ ಕೆಳಕಂಡ ಹಾನಿಗಳು ಕಂಡುಬಂದವು,

1. ವಾಹನ ಮುಂಭಾಗದ ಎಡಬದಿಯ ಚಕ್ರವು ಆ್ಯಕ್ಸೆಲ್‌ನಿಂದ ಬೇರ್ಪಟ್ಟಿತ್ತು.
2. ವಾಹನದ ಬಾನೆಟ್ ಜಖಂಗೊಂಡಿತ್ತು,
3. ವಾಹನದ ಹಿಂಭಾಗದ ಎರಡೂ ಕಡೆಯ ವೀಲ್ ಫೆಂಡರ್ ಜಖಂಗೊಂಡಿತ್ತು,
4. ಸೈಲನ್ಸರ್ ನ ಕವಚ ಜಖಂಗೊಂಡಿತ್ತು,

5. ಚಾಲಕ ಮೇಲ್ಹಾವಣಿಯ ಗ್ರಿಲ್ ತಗ್ಗುಗೊಂಡಿತ್ತು,

6. ಟ್ರೈಲರ್ ನ ಕಂಪ್ಲಿಂಗ್ ಹುಕ್ ಜಖಂಗೊಂಡಿತ್ತು.

ವಾಹನದ ಇತರೆ ಭಾಗಗಳು ಸುಸ್ತಿಯಲ್ಲಿದ್ದವು. ಸದರಿ ವಾಹನವನ್ನು ಚಲಾಯಿಸಿ ಪರಿಶೀಲಿಸಿದಾಗ ಅದರ ತಡೆ ವ್ಯವಸ್ಥೆಯು ಸರಿ ಇದ್ದು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿದ್ದವು. ಸದರಿ ಪ್ರಕರಣದ ಅಪಘಾತವು ವಾಹನದ ಯಾವುದೇ ತಾಂತ್ರಿಕ ದೋಷಗಳಿಂದ ಸಂಭವಿಸಿಲ್ಲವೆಂದು ನಾನು ಅಭಿಪ್ರಾಯ ಕೊಟ್ಟು ನನ್ನ ವರದಿಯನ್ನು ನೀಡಿದೆನು. ಸಾಕ್ಷಿಯು ಎಂ.ವಿ.ಎ. ವರದಿಯಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಎಂ.ವಿ.ಎ ವರದಿಯನ್ನು ನಿಪಿ-7 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ</u> ಆರೋಪಿತರ ಪರ ಶ್ರೀ ಹೆಚ್.ಎಂ.ಎಂ., ವಕೀಲರಿಂದಃ**

ನಾನು ವಾಹನವನ್ನು ತಪಾಸಣೆ ಮಾಡುವ ಕಾಲದಲ್ಲಿ ಫೋಟೋ ಹಾಗೂ ವೀಡಿಯೋವನ್ನು ತೆಗೆದಿಲ್ಲ. ವಾಹನ ತಪಾಸಣೆಗಾಗಿ ನಾನು ಮಾತ್ರ ಹೋಗಿದ್ದೆ. ಸಾಮಾನ್ಯವಾಗಿ ವಾಹನದ ತಡೆವ್ಯವಸ್ಥೆ ಸರಿ ಇದ್ದಲ್ಲಿ ಅಪಘಾತವಾಗುವ ಸಂಭವ ಕಡಿಮೆ ಎಂದರೆ ಸರಿ. ದೊಡ್ಡಬೆಳವಂಗಲ ಪೋಲೀಸ್ ಠಾಣೆಯ ಆವರಣಕ್ಕೆ ಭೇಟಿ ಕೊಟ್ಟಿಲ್ಲ ಹಾಗೂ ವಾಹನಗಳನ್ನು ಪರಿಶೀಲಿಸಿಲ್ಲ ಎಂದರೆ ಸರಿಯಲ್ಲ. ನಾನು ದೊಡ್ಡಬೆಳವಂಗಲ ಪೋಲೀಸ್ ಠಾಣೆಯಿಂದ ಬಂದಂತಹ ಪತ್ರದ ಆಧಾರದ ಮೇಲೆಯೇ ನಿಪಿ-7 ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಪೋಲೀಸರಿಗೆ ಹಾಗೂ ಫಿರ್ಯಾದುದಾರರಿಗೆ ಸಹಾಯವಾಗುವಂತೆ ನಿಪಿ-7 ವರದಿಯನ್ನು ಕೊಟ್ಟು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ:</u> ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನ ರೀತ್ಯಾ ಬೆರಳಚ್ಚುಗಾರರಿಂದ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಅದೆ**

**ಅಪರ ಸಿವಿಲ್ ನ್ಯಾ. ಮತ್ತು**
**ಜೆ.ಎಂ.ಎಫ್.ಸಿ, ದೊಡ್ಡಬಳ್ಳಾಪುರ**